ಓ:ಎಸ್:ನಂ.288/2012

ಡಿ.ಡಬ್ಲ್ಯೂ-1

***ದಿ: 06-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲು: ವಾದಿ ಪರ ಶ್ರೀ ಟಿ ಎಲ್ ಪಿ ವಕೀಲರಿಂದ***

ವಾದಿ 6 ಗುಂಟೆ ಜಮೀನನ್ನು ಲಕ್ಷ್ಮಮ್ಮ ಹಾಗೂ ಅವರ ಕುಟುಂಬದವರಿಂದ ಖರೀದಿಸಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆ ಗಂಗಮ್ಮರವರಿಂದ 1.12 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ. ಸದರಿ ಸ್ವತ್ತಿನ ಸರ್ವೇ ನಂ.35/3 ಆಗಿರುತ್ತದೆ. ಅದು ತರೀಕೆರೆ ಗ್ರಾಮಕ್ಕೆ ಸೇರಿರುತ್ತದೆ. ಸದರಿ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ಜಯಣ್ಣನವರ ಮನೆ ಮತ್ತು ಜಾಗ, ಪಶ್ಚಿಮಕ್ಕೆ ರಾಜಪ್ಪನವರ ಮನೆ, ಉತ್ತರಕ್ಕೆ ನಾಗಪ್ಪ ಕಾಲೋನಿ, ದಕ್ಷಿಣಕ್ಕೆ ರಸ್ತೆ ಇರುತ್ತದೆ. ನಾವು ಖರೀದಿಸಿರುವ ಬಗ್ಗೆ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಅಜ್ಜಿ ತಿಮ್ಮಮ್ಮ ಗಂಗಮ್ಮನವರಿಂದ ಸ್ವತ್ತನ್ನು ಖರೀದಿಸಿದ್ದು, ಅದರ ಸರ್ವೇ ನಂ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ನಮ್ಮ ಜಾಗದ ಪೂರ್ವಕ್ಕೆ ವಾದಿಯರ ಸ್ವತ್ತು ಇದೆ ಎಂದರೆ ಸರಿ ಅಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ದಾವೆ ವಿಚಾರಣೆಯಲ್ಲಿರುವಾಗ ಅದರಲ್ಲಿ ನಾವು ಬಚ್ಚಲು ಕಟ್ಟುತ್ತಿರುವಾಗ ತೆಗೆದ ಪೋಟೋ ಎಂದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-7 ರ ಬಲಭಾಗದಲ್ಲಿ ಕಾಣುವ ಮನೆ ನಮ್ಮದು ಎಂದರೆ ಸರಿ. ಮನೆಯ ಪೂರ್ವ ಭಾಗಕ್ಕೆ ಇರುವ ಜಾಗಕ್ಕೆ ನಮ್ಮ ತಕರಾರು ಇಲ್ಲ ಎಂದರೆ ಸಾಕ್ಷಿಯು ಅದು ನಮ್ಮ ಜಾಗ ಎಂದು ನುಡಿದಿರುತ್ತಾರೆ. ಸದರಿ ಖಾಲಿ ಜಾಗದ ಪೂರ್ವಕ್ಕೆ ಜಯಣ್ಣನವರ ಸ್ವತ್ತು ಇದೆ. ನಂತರ ನಾವು ಬಚ್ಚಲು ಮನೆ ಕಟ್ಟಿರುವುದಿಲ್ಲ ಎಂದರೆ ಸರಿ. ನಿಪಿ-7 ರಲ್ಲಿ ಕಾಣುವ ಮನೆಯ ಪಕ್ಕದಲ್ಲಿರುವ ಖಾಲಿ ಜಾಗದ ಬಗ್ಗೆ ನಮ್ಮ ಮತ್ತು ವಾದಿಯ ಮಧ್ಯೆ ವಿವಾದವಿದ್ದು ಅದಕ್ಕಾಗಿ ಈ ದಾವೆ ಎಂದರೆ ಸರಿ. ನನ್ನ ತಂದೆಯ 1 ನೇ ಪ್ರತಿವಾದಿ ಜೀವಂತವಿರುವಾಗ ತಹಶಿಲ್ದಾರ್ ರವರು ಅಳತೆ ಮಾಡಲು ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸ್ವತ್ತನ್ನು ಅಳತೆ ಮಾಡಿದ ಸರ್ವೇಯರ್ ಪುರುಷೋತ್ತಮ್ ರವರು ತೀರಿಕೊಂಡ ಕಾರಣಕ್ಕೆ ವಾದಿಯು ನ್ಯಾಯಾಲಯದಿಂದ ಅಳತೆಯಾಗಲಿ ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ ಅಲ್ಲ. ನ್ಯಾಯಾಲಯದ ನಿಯೋಗಿಯು ನಮಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ಸದರಿ ನಿಯೋಗಿಯು ದಾವ ಸ್ವತ್ತನ್ನು ಅಳತೆ ಮಾಡುವಾಗ ನಾವು ತಕರಾರು ಮಾಡಿರುತ್ತೇವೆ ಎಂದರೆ ಸರಿ ಅಲ್ಲ. ಸದರಿ ನಿಯೋಗಿಯು ಅಳತೆ ಕಾರ್ಯ ಮಾಡಿ ವರದಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ನಿಯೋಗಿಯು ಅಳತೆ ಮಾಡಲು ಪೋಲೀಸ್ ರಕ್ಷಣೆ ಕೋರಿರುವ ಬಗ್ಗೆ ನನಗೆ ಗೊತ್ತಿಲ್ಲ. ಪೋಲೀಸ್ ರಕ್ಷಣೆಯಲ್ಲಿ ನ್ಯಾಯಾಲಯದ ನಿಯೋಗಿ ಅಳತೆ ಕಾರ್ಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಖರೀದಿಸಿರುವ ಸರ್ವೇ ನಂ.35/7 0.6-00 ಗುಂಟೆ ಜಮೀನಿಗೆ ನಮಗೆ ಯಾವುದೇ ಅಧಿಕಾರವಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 2012 ರಲ್ಲಿ ಈ ದಾವೆ ಸಲ್ಲಿಸಿರುವ ಪೂರ್ವದಲ್ಲಿ

ವಾದಿಯು ನನ್ನ ತಂದೆ ಮತ್ತು ಅಜ್ಜಿಯಾದ *1* ಮತ್ತು *2* ನೇ ಪ್ರತಿವಾದಿಯರು ಪೋಲೀಸ್ ಠಾಣೆಗೆ ದೂರುನೀಡಿದ್ದಾರೆ ಎಂದರೆ ಸರಿ ಅಲ್ಲ. ನಂತರ ಅವರು ಪ್ರಸ್ತುತ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. *0.4-00* ಗುಂಟೆ ಜಾಗವನ್ನು ನಾವು ಒತ್ತುವರಿ ಮಾಡಿದ್ದೇವೆ ಎಂದು ಸಾಕ್ಷಿಯ ಈ ದಾವೆ ಸಲ್ಲಿಸಿರುವುದು ಗೊತ್ತು ಎಂದು ನುಡಿಯುತ್ತಾರೆ. ಉಳಿದ *0.2-00* ಗುಂಟೆ ಜಾಗಕ್ಕೆ ನಾವು ತಕರಾರು ಮಾಡಿದಕ್ಕೆ ವಾದಿಯು ನಮ್ಮ ವಿರುದ್ಧ ಓ.ಎಸ್.*357/2012* ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯ ಪರವಾಗಿ ನಿರ್ಬಂಧಕಾಜ್ಞೆ ಆದೇಶ ಆಗಿದೆ ಎಂದರೆ ಸರಿ. ಅದರ ವಿರುದ್ಧ ನಾವು ಅಪೀಲ್ ಸಲ್ಲಿಸಿದ್ದೇವೆ ಎಂದರೆ ಸರಿ. ಡಿಕ್ರಿಯಾದ *0.2-00* ಗುಂಟೆ ಜಾಗದ ಪೂರ್ವಕ್ಕೆ ಧನಂಜಯ ಅಲಿಯಾಸ್ ಜಯಣ್ಣನವರ ಸ್ವತ್ತು ಇದೆ ಎಂದರೆ ಸರಿ. ದಾವ ಸ್ವತ್ತಿನ ಚಕ್ಕುಬಂಧಿಯ ಒಳಗೆ ನಮ್ಮ ಹಕ್ಕು ಇರುವ ಜಾಗ ಇರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಕ್ರಯಪತ್ರ ಮತ್ತು ಪಹಣಿ ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿನ ಚಕ್ಕುಬಂಧಿ ಹಾಗೂ ನಾವು ಖರೀದಿಸಿದ ಚಕ್ಕುಬಂಧಿ ಒಂದೇ ಮತ್ತು ಬೇರೆ ಬೇರೆ ಎಂದು ನನಗೆ ಹೇಳಲಾಗುವುದಿಲ್ಲ. ನಾವು ಕಟ್ಟಿರುವ ಮನೆ ವಾದಿಗೆ ಸೇರಿದ್ದಲ್ಲ ಎನ್ನುವುದೇ ನಮ್ಮ ತಕರಾರು ಎಂದರೆ ಸರಿ. ಸದರಿ ಸ್ವತ್ತಿನ ಮಾಲೀಕರೆಂದು ವಾದಿಯು ರುಜುವಾತುಪಡಿಸಿದರೆ ಅದನ್ನು ಬಿಟ್ಟುಕೊಡಲು ತೊಂದರೆ ಎಂದರೆ ಸಾಕ್ಷಿಯು ನಾವು ತುಂಬಾ ಹಿಂದೇ ಮನೆ ಕಟ್ಟಿದ್ದು ಅದನ್ನು ಬಿಟ್ಟುಕೊಡುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.*35/3* ಎಂದು ಕ್ರಯಪತ್ರದಲ್ಲಿ ನಮೂದಾಗಿದ್ದು, ಪಹಣಿಯಲ್ಲಿ *35/1* ಎಂದು ನಮೂದಾಗಿದ್ದು ಅದನ್ನು ಸರಿಪಡಿಸಲು ತಹಶಿಲ್ದಾರ್ ಮುಂದೆ ಅರ್ಜೀ ಸಲ್ಲಿಸಿರುತ್ತಾರೆ. ನಮ್ಮ *1* ಮುಕಾಲು ಗುಂಟೆ ಸ್ವತ್ತನ್ನು ಇದುವರೆಗೂ ತಹಶಿಲ್ದಾರ್ ರವರು ಅಳತೆ ಮಾಡಿ ಗುರುತಿಸಿಲ್ಲ ಎಂದರೆ ಸಾಕ್ಷಿಯು ದಾವೆ ಎಸಿ ಕೋರ್ಟ್ ನಲ್ಲಿ ಬಾಕಿ ಇರುವುದರಿಂದ ಗುರುತಿಸಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಸೇರಿದ *0.4-00* ಗುಂಟೆ ಜಾಗದಲ್ಲಿ ನಾವು ಅನಧಿಕೃತವಾಗಿ ವಾಸವಿದ್ದೇವೆ ಸರಿ ಅಲ್ಲ. ಅದನ್ನು ಬಿಟ್ಟುಕೊಡುವ ಬೇಕೆನ್ನುವ ಕಾರಣಕ್ಕೆ ಸುಳ್ಳು ತಕರಾರು ಮಾಡುತ್ತಿದ್ದೇವೆ ಎಂದರೆ ಸರಿ ಅಲ್ಲ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***